ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

## ಕಾಲೇಜು ಶಿಕ್ಷಣ ಆಯುಕ್ತರ ಕಛೇರಿಯ ನಡವಳಿಗಳು

ವಿಷಯ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಗಳೂರು, ಯಲಬುರ್ಗಾ ತಾ॥, ಕೊಪ್ಪಳ ಜಿಲ್ಲೆ ಈ ಕಾಲೇಜಿಗೆ ದಾನಿಗಳು ಇಚ್ಛಿಸಿದ ಹೆಸರನ್ನು ನಾಮಕರಣ ಮಾಡುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಆದೇಶ ಸಂಖ್ಯೆ:ಇಡಿ:51:ಯೋಸಕ:89:ಬೆಂ, ದಿ:11-09-1989.
2) ಸರ್ಕಾರದ ಪತ್ರ ಸಂಖ್ಯೆ: ಇಡಿ/41/ಹೆಚ್‌ಪಿಸಿ/2013, ದಿ:10.02.2014
3) ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಗಳೂರು, ಇವರ ಪತ್ರ ಸಂಖ್ಯೆ:ಸಪ್ರದಕಾಮ/ನಾಮಕರಣ/2017-18/75, ದಿ:27.04.2017

*********

**ಪ್ರಸ್ತಾವನೆ:**

ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಗಳೂರು, ಯಲಬುರ್ಗಾ ತಾ॥, ಕೊಪ್ಪಳ ಜಿಲ್ಲೆ ಕಾಲೇಜಿಗೆ "ಶ್ರೀ ಚೆನ್ನಮಲ್ಲ ಮಹಾಸ್ವಾಮಿಗಳು, ಶ್ರೀ ಸುವರ್ಣಗಿರಿ ಸಂಸ್ಥಾನ ವಿರಕ್ತ ಮಠ (ಕಲ್ಮಠ), ಕನಕಗಿರಿ" ಇವರು ದಿ:11.09.2014 ರಂದು ಮಂಗಳೂರಿನ ಸರ್ವೆ ನಂ.462 ಹಿಸ್ಸಾ-2 ರಲ್ಲಿ 4 ಎಕರೆ ಜಮೀನನ್ನು ದಾನವಾಗಿ ನೀಡಿ, ಈ ಜಮೀನಿನಲ್ಲಿ ಭವಿಷ್ಯದಲ್ಲಿ ನಿರ್ಮಿಸುವ ಯಾವುದೇ ಸರ್ಕಾರಿ ಸಂಸ್ಥೆಗಳಿಗೆ "ಸುವರ್ಣಗಿರಿ ಡಾ. ಚೆನ್ನಮಲ್ಲ ಸ್ವಾಮೀಜಿ" ಇವರ ಹೆಸರನ್ನು ಇಡುವಂತೆ ಷರತ್ತು ವಿಧಿಸಿ ದಾನ ನೀಡಿರುತ್ತಾರೆ. ಅದರಂತೆ ದಾನ ಪಡೆದ ಕಾಲೇಜಿನ ಪ್ರಾಂಶುಪಾಲರು ದಾನಿಗಳು ಇಚ್ಛಿಸಿದ ಹೆಸರನ್ನು ಕಾಲೇಜಿಗೆ ನಾಮಕರಣ ಮಾಡಲು ಕೋರಿ ಉಲ್ಲೇಖ-3ರ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಉಲ್ಲೇಖ-1ರ ಸರ್ಕಾರದ ಆದೇಶ ಷರತ್ತುಗಳನ್ವಯ ಮತ್ತು ಉಲ್ಲೇಖ-2ರ ಸರ್ಕಾರದ ಪತ್ರದಲ್ಲಿ ದಾನಿಗಳು ಇಚ್ಛಿಸಿದ ಹೆಸರನ್ನು ನಾಮಕರಣ ಮಾಡುವ ಕುರಿತು ಇಲಾಖೆಯ ಹಂತದಲ್ಲಿ ಕ್ರಮವಹಿಸಲು ತಿಳಸಲಾಗಿರುವಂತೆ ಕಾಲೇಜಿಗೆ ದಾನಿಗಳು ಇಚ್ಛಿಸಿದ ಹೆಸರನ್ನು ನಾಮಕರಣ ಮಾಡಲು ಈ ಆದೇಶ.

## ಆದೇಶ ಸಂಖ್ಯೆ:ಕಾಶಿಇ/13/ಯೋಜನೆ/2017-18, ಬೆಂಗಳೂರು, ದಿನಾಂಕ:26.05.2017

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಮಂಗಳೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ಜಮೀನನ್ನು ದಾನ ಮಾಡಿರುವ ಶ್ರೀ ಚೆನ್ನಮಲ್ಲ ಮಹಾಸ್ವಾಮಿಗಳು, ಶ್ರೀ ಸುವರ್ಣಗಿರಿ ಸಂಸ್ಥಾನ ವಿರಕ್ತ ಮಠ (ಕಲ್ಮಠ), ಕನಕಗಿರಿ ರವರ ಇಚ್ಛೆಯಂತೆ **"ಸುವರ್ಣಗಿರಿ ಡಾ. ಚೆನ್ನಮಲ್ಲ ಸ್ವಾಮೀಜಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಗಳೂರು" ಯಲಬುರ್ಗಾ ತಾಲ್ಲೂಕು** ಎಂದು ನಾಮಕರಣ ಮಾಡಲಾಗಿದೆ. ಇನ್ನು ಮುಂದೆ ಸದರಿ ಕಾಲೇಜಿಗೆ ಸಂಬಂಧಿಸಿದಂತೆ ಎಲ್ಲಾ ಪತ್ರ ವ್ಯವಹಾರಗಳನ್ನು ಮೇಲ್ಕಾಣಿಸಿದ ಹೆಸರಿನಲ್ಲಿ ನಡೆಸುವಂತೆ ತಿಳಿಸಲಾಗಿದೆ.

(ಕರಡು ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಪ್ರಾಂಶುಪಾಲರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಂಗಳೂರು, ಯಲಬುರ್ಗಾ ತಾ॥, ಕೊಪ್ಪಳ ಜಿಲ್ಲೆ
2. ಕುಲಸಚಿವರು, ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ, ವಿಜಯನಗರ, ಬಳ್ಳಾರಿ
3. ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ, ಕಲಬುರಗಿ
4. ಮಹಾಲೇಖಪಾಲರು, ಕರ್ನಾಟಕ ರಾಜ್ಯ, ಬೆಂಗಳೂರು.
5. ಸಂಬಂಧಪಟ್ಟ ದಾನಿಗಳಿಗೆ-ಪ್ರಾಂಶುಪಾಲರ ಮುಖಾಂತರ.

ಪ್ರತಿಯನ್ನು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಕಾಲೇಜು ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು.
2. ಮಾಹಿತಿ ಅಧಿಕಾರಿಗಳು, ಮಾಹಿತಿ ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು
3. ಆಯುಕ್ತರು, ನಿರ್ದೇಶಕರು, ಹೆಚ್ಚುವರಿ ನಿರ್ದೇಶಕರು, ಮುಖ್ಯ ಆಡಳಿತಾಧಿಕಾರಿಗಳು ಮತ್ತು ಜಂಟಿ ನಿರ್ದೇಶಕರು ಇವರ ಆಪ್ತ ಸಹಾಯಕರುಗಳು, ಕೇಂದ್ರ ಕಛೇರಿ, ಬೆಂಗಳೂರು.
4. ಕೇಂದ್ರ ಕಛೇರಿಯ ಎಲ್ಲಾ ವಿಭಾಗಗಳ ಅಧೀಕ್ಷಕರುಗಳಿಗೆ
5. ಕಛೇರಿ ಪ್ರತಿ.